# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಬೆಳಗಾವಿ ಜಿಲ್ಲೆಯ ಗ್ರಾಮಗಳ ಆಯ್ಕೆ ಅನುಮೋದನೆ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ಇವರ ಪತ್ರದ ಸಂಖ್ಯೆ:ಜಿಪಂಬೆ:ಸುಗ್ರಾಯೋ:ವಿವ-15: 2012-13, ದಿ:03.09.2012

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲಿನ ಓದಲಾಗಿದೆ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಬೆಳಗಾವಿ ಜಿಲ್ಲೆಯ **6 ತಾಲ್ಲೂಕುಗಳ 72 ಗ್ರಾಮಗಳನ್ನು** ಆಯ್ಕೆ ಮಾಡಿ ಶಾಸಕರಿಂದ ಶಿಫಾರಸ್ಸು ಮಾಡಿದ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ಅವರು ಓದಲಾಗಿದೆ(3)ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಬೆಳಗಾವಿ ಜಿಲ್ಲೆಯ **6 ತಾಲ್ಲೂಕುಗಳ 72 ಗ್ರಾಮಗಳನ್ನು** ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:70:ಸುಗ್ರಾಯೋ:2012.** **ಬೆಂಗಳೂರು, ದಿನಾಂಕ:08.10.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಬೆಳಗಾವಿ ಜಿಲ್ಲೆಯ **ಅಥಣಿ, ಬೈಲಹೊಂಗಲ, ಗೋಕಾಕ್, ಖಾನಾಪೂರ, ರಾಯಭಾಗ, ರಾಮದುರ್ಗ ತಾಲ್ಲೂಕುಗಳ 72 ಗ್ರಾಮಗಳಿಗೆ** ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.
5. ಆಯ್ಕೆಯಾದ ಗ್ರಾಮವು ಈ ಯೋಜನೆಯ ಹಿಂದಿನ ಹಂತದಲ್ಲಿ ಆಯ್ಕೆಯಾಗಿಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಬೆಳಗಾವಿ.
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ.
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9. ಸಂಪಾದಕರು, ಕರ್ನಾಟಕ ವಿಕಾಸ, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
10. ಹೆಚ್ಚುವರಿ.

# ಅನುಬಂಧ

## ಬೆಳಗಾವಿ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ – ಅನುಮೋದಿತ ಗ್ರಾಮಗಳ ಪಟ್ಟಿ

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:70:ಸುಗ್ರಾಯೋ:2012, ದಿನಾಂಕ:08.10.2012**

ಜಿಲ್ಲೆ: ಬೆಳಗಾವಿ

| ಕ್ರ.ಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ತಾಲ್ಲೂಕುವಾರು ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಅಥಣಿ | 1 | ಕ್ಕಾಗವಾಡ | 13299 | 333.73 |
| | | 2 | ಅನಂತಪೂರ | 7288 | 182.89 |
| | | 3 | ಬಿಳೇಗಾಂವ | 3230 | 81.05 |
| | | 4 | ಮಾಯನಟ್ಟಿ | 523 | 13.12 |
| | | 5 | ಸತ್ತಿ | 8684 | 217.92 |
| | | 6 | ಕಕಮರಿ | 4562 | 114.48 |
| | | 7 | ಕೊಹಳ್ಳಿ | 5948 | 149.26 |
| | | 8 | ಹಲ್ಯಾಳ | 4525 | 113.55 |
| | | | ಒಟ್ಟು | **48059** | **1206.00** |
| 2 | ಬೈಲಹೊಂಗಲ | 1 | ನೇಸರಗಿ | 6480 | 161.39 |
| | | 2 | ನಿಚ್ಚನಕಿ | 2618 | 65.20 |
| | | 3 | ಉಗರಖೋಡ | 2338 | 58.23 |
| | | 4 | ನಾಗನೂರ | 5413 | 134.81 |
| | | 5 | ಹೊಲಿಕಟ್ಟೆ | 2228 | 55.49 |
| | | 6 | ಯರಡಾಳ | 1665 | 41.47 |
| | | 7 | ಯತ್ತಿನಕೇರಿ | 1307 | 32.55 |
| | | 8 | ಚಿಕ್ಕನಂದಿಹಳ್ಳಿ | 1221 | 30.41 |
| | | 9 | ಬಸ್ಸಾಪೂರ | 886 | 22.07 |
| | | 10 | ಕುಲಮನಟ್ಟಿ | 623 | 15.52 |
| | | 11 | ಕೊರವಿನಕೊಪ್ಪ | 1498 | 37.31 |
| | | 12 | ಸಿದ್ಧಸಮುದ್ರ | 1433 | 35.69 |
| | | 13 | ನನಗುಂದಿಕೊಪ್ಪ | 634 | 15.79 |
| | | 14 | ಬಿದರಗಡ್ಡಿ | 1209 | 30.11 |
| | | 15 | ಕಡಸಗಟ್ಟಿ | 629 | 15.67 |
| | | 16 | ಗುಡದೂರ | 979 | 24.38 |
| | | 17 | ಚಿವಟಗುಂಡಿ | 1538 | 38.30 |
| | | 18 | ಹಿರೇಬೆಳ್ಳಿಕಟ್ಟಿ | 970 | 24.16 |
| | | 19 | ಮೂಗಬಸವ | 2347 | 58.45 |
| | | | ಒಟ್ಟು | **36016** | **897.00** |

| | | | | | |
|---|---|---|---|---|---|
| 3 | ಗೋಕಾಕ್ | 1 | ಮದವಾಲ | 2028 | 50.68 |
| | | 2 | ಕೆಳಗಿನಟ್ಟಿ | 1894 | 47.33 |
| | | 3 | ತವಗಿ | 5682 | 142.00 |
| | | 4 | ಮಾಲದಿನ್ನಿ | 3868 | 96.67 |
| | | 5 | ಬೆಣಚಿನಮರ್ಡಿ(ಕೊ) | 5115 | 127.83 |
| | | 6 | ಉಪ್ಪಾರಹಟ್ಟಿ | 3747 | 93.64 |
| | | 7 | ರಾಜಾಪೂರ | 6979 | 174.42 |
| | | 8 | ಖಾನಟ್ಟಿ | 2322 | 58.03 |
| | | 9 | ಧರ್ಮಟ್ಟಿ | 4019 | 100.44 |
| | | 10 | ಗುಜನಟ್ಟಿ | 2095 | 52.36 |
| | | 11 | ಜೋಕಾನಟ್ಟಿ | 2330 | 58.23 |
| | | 12 | ಹುಣಶ್ಯಾಳ.ಪಿ.ಜಿ. | 5896 | 147.35 |
| | | | **ಒಟ್ಟು** | **45975** | **1149.00** |
| 4 | ಖಾನಾಪೂರ | 1 | ಕೊಡಚವಾಡ | 1587 | 39.68 |
| | | 2 | ಬೋಗುರ | 1913 | 47.83 |
| | | 3 | ಶಿವಾಜಿನಗರ(ಬಾಚೋಳಿ) | 1254 | 31.35 |
| | | 4 | ಚಿಕ್ಕಹಟ್ಟಿಹೊಳಿ | 1138 | 28.45 |
| | | 5 | ಕರಂಬಳ | 1322 | 33.05 |
| | | 6 | ಜುಂಜವಾಡ ಕೆ.ಎನ್. | 1565 | 39.13 |
| | | 7 | ಮಳವಾಡ | 839 | 20.98 |
| | | 8 | ತೋಪಿನಕಟ್ಟಿ | 2525 | 63.13 |
| | | 9 | ಇದ್ದಲಹೊಂಡ | 1504 | 37.60 |
| | | 10 | ಅಮಟೆ | 1310 | 32.75 |
| | | 11 | ರಾಮಗುರವಾಡಿ | 1550 | 38.75 |
| | | 12 | ಕಣಕುಂಬಿ | 1673 | 41.83 |
| | | 13 | ನಿಟ್ಟೂರ | 2603 | 65.08 |
| | | 14 | ಲಿಂಗನಮಠ | 2421 | 60.53 |
| | | 15 | ಬಿಜಗರ್ಣಿ | 1048 | 26.20 |
| | | 16 | ಶಿರೋಲಿ | 1028 | 25.70 |
| | | | **ಒಟ್ಟು** | **25280** | **632.00** |

| | | | | | |
|---|---|---|---|---|---|
| 5 | ರಾಯಭಾಗ | 1 | ಸವದತ್ತಿ | 8761 | 218.36 |
| | | 2 | ಜಲಾಲಪೂರ | 3533 | 88.06 |
| | | 3 | ಯಡ್ರಾವ | 2353 | 58.65 |
| | | 4 | ಭಾವಚಿ | 1789 | 44.59 |
| | | 5 | ಪರಮಾನಂದವಾಡಿ | 5145 | 128.23 |
| | | 6 | ಕಪ್ಪಲಗುದ್ದಿ | 4296 | 107.07 |
| | | 7 | ಸುಲ್ತಾನಪೂರ | 1731 | 43.14 |
| | | 8 | ಮರಕೋಡಿ | 718 | 17.90 |
| | | 9 | ಕಣದಾಳ | 4271 | 106.45 |
| | | 10 | ಕಟಕಭಾವಿ | 3272 | 81.55 |
| | | | **ಒಟ್ಟು** | **35869** | **894.00** |
| 6 | ರಾಮದುರ್ಗ | 1 | ಬಟಕುರ್ಕಿ | 4186 | 108.73 |
| | | 2 | ಹೊಸಕೋಟೆ | 3141 | 81.59 |
| | | 3 | ಬುದನೂರ | 3114 | 80.88 |
| | | 4 | ಹಿರೇಕೊಪ್ಪ.ಕೆ.ಎಸ್. | 2639 | 68.55 |
| | | 5 | ತುರನೂರ | 2165 | 56.24 |
| | | 6 | ಕಲಹಾಳ | 2093 | 54.36 |
| | | 7 | ಹಲಗತ್ತಿ | 3721 | 96.65 |
| | | | **ಒಟ್ಟು** | **21059** | **547.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **212258** | **5325.00** |

**(ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ